# ಜನಗಣ ಮಂಗಳದಾಯಕ...

ದೇಶಪ್ರೇಮ ಮತ್ತು ರಾಷ್ಟ್ರೀಯತೆಯ ಭಾವವನ್ನು ಯಾವುದೇ ಕಟ್ಟಾಜ್ಞೆ ಅಥವಾ ಕಾನೂನುಗಳಿಂದ ಉದ್ದೀಪಿಸಲು ಸಾಧ್ಯವಿಲ್ಲ ಎನ್ನುವುದು ನಿಜ. ಜನರ ಸಾಮೂಹಿಕ ಪಾಲ್ಗೊಳ್ಳುವಿಕೆ, ಸಮಾನ ಉದ್ದೇಶ ಮತ್ತು ಇದು ನಮಗೆ ಸೇರಿದ್ದು ಎಂಬ ಭಾವದಿಂದ ಮಾತ್ರ ದೇಶಪ್ರೇಮದ ಉದ್ದೀಪನೆ ಸಾಧ್ಯ.

ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ದೇಶದ ಹೆಮ್ಮೆಯ ಸಂಕೇತಗಳು. ದೇಶದ ಸಾರ್ವಭೌಮತೆಯನ್ನು ಬಹಿರಂಗವಾಗಿ ವ್ಯಕ್ತಪಡಿಸುವ ಗುರುತುಗಳು. ಇವುಗಳನ್ನು ಸದಾ ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. ಇವುಗಳಿಗೆ ಸಾರ್ವಜನಿಕವಾಗಿ ಗೌರವ ಸಲ್ಲಿಸುವಾಗ ಅಗೌರವ ಉಂಟಾಗುವ ಸಂದರ್ಭ ಬರದಂತೆ ಎಚ್ಚರ ವಹಿಸುವುದು ಒಳ್ಳೆಯದು. ಹಾಗೆಯೇ ರಾಷ್ಟ್ರೀಯ ಲಾಂಛನಗಳಿಗೆ ಸಲ್ಲಿಸುವ ಈ ಗೌರವ ಹೃದಯಾಂತರಾಳದಿಂದ ಬರಬೇಕೇ ಹೊರತು, ಕೇವಲ ತೋರಿಕೆಯ ಪ್ರದರ್ಶನದಿಂದ ಪ್ರಯೋಜನವಿಲ್ಲ. ದೇಶದ ಎಲ್ಲ ಸಿನಿಮಾ ಮಂದಿರಗಳಲ್ಲಿ ಪ್ರತಿ ಪ್ರದರ್ಶನಕ್ಕೆ ಮುನ್ನ ರಾಷ್ಟ್ರಗೀತೆ ಹಾಡುವುದನ್ನು ಕಡ್ಡಾಯ ಮಾಡಿ ಸುಪ್ರೀಂಕೋರ್ಟ್ ಹಿಂದೆ ಹೊರಡಿಸಿದ್ದ ಆದೇಶವನ್ನು ಈಗ ವಾಪಸ್ ಪಡೆದಿದೆ. 2016 ಡಿ.1ಕ್ಕಿಂತ ಹಿಂದೆ ಇದ್ದಂತಹ ಯಥಾಸ್ಥಿತಿಯನ್ನೇ ಮುಂದುವರಿಸಲೂ ಕೋರ್ಟ್ ಸೂಚಿಸಿದೆ. ‘ಸಿನಿಮಾ ಮಂದಿರಗಳಲ್ಲಿ ಪ್ರತಿ ಪ್ರದರ್ಶನಕ್ಕೆ ಮುನ್ನ ಎದ್ದು ನಿಂತು ರಾಷ್ಟ್ರಗೀತೆ ಹಾಡುವುದರಿಂದ ದೇಶಪ್ರೇಮ ಉಕ್ಕಿ, ರಾಷ್ಟ್ರೀಯ ಭಾವನೆ ಹೆಚ್ಚಲಿದೆ’ ಎಂದು ಹಿಂದೆ ತೀರ್ಪು ನೀಡಿದ ಮುಖ್ಯನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟಿದ್ದರು. ಬಹುಶಃ ತಮ್ಮ ಗ್ರಹಿಕೆ ಸುಳ್ಳು ಎನ್ನುವುದು ಈಗ ಸುಪ್ರೀಂಕೋರ್ಟ್‌ಗೆ ಅರಿವಾದಂತಿದೆ. ಸಿನಿಮಾ ಮಂದಿರಗಳಲ್ಲಿ ಪ್ರತಿ ಪ್ರದರ್ಶನಕ್ಕೂ ಮುನ್ನ ರಾಷ್ಟ್ರಗೀತೆ ಹಾಡುವುದರಿಂದ ಅನಗತ್ಯ ಕಿರಿಕಿರಿಗಳೇ ಹೆಚ್ಚು ಎನ್ನುವುದು ಮನವರಿಕೆ ಆದಂತಿದೆ. ರಾಷ್ಟ್ರೀಯ ಚಿನ್ಹೆಗಳನ್ನು ಅಗೌರವಿಸಬಾರದು ಎನ್ನುವ ಮಾತಿನ ಜತೆಗೇ ಸುಪ್ರೀಂಕೋರ್ಟ್ ನೀಡಿರುವ ಈ ತೀರ್ಪು ಪ್ರಾಯೋಗಿಕವಾಗಿದ್ದು, ಬುದ್ಧಿವಂತಿಕೆಯದ್ದೂ ಹೌದು.

ಸಿನಿಮಾ ಮಂದಿರಗಳಿಗೆ ಜನರು ಇತ್ತೀಚೆಗೆ ಹೋಗುವುದು ಕೇವಲ ಮನರಂಜನೆಯ ಉದ್ದೇಶಕ್ಕೆ. ಈಗ ದೇಶದಲ್ಲಿ ನಿರ್ಮಾಣವಾಗುತ್ತಿರುವ ಸಿನಿಮಾಗಳಲ್ಲಿ ಜನರ ಬೌದ್ಧಿಕ ತಿಳುವಳಿಕೆಯನ್ನು ಹೆಚ್ಚಿಸುವ ಅಥವಾ ಗಂಭೀರ ಕಲಾಪ್ರಜ್ಞೆಯನ್ನು ಉದ್ದೀಪಿಸುವ ಪ್ರಯತ್ನಗಳು ತೀರಾ ಕಡಿಮೆಯಾಗಿವೆ. ಮನರಂಜನೆಯೂ ಶುದ್ಧ ರೂಪದಲ್ಲಿ ಸಿಗುತ್ತಿಲ್ಲ. ಏನಿದ್ದರೂ ವಿಕೃತ ರೂಪದ, ಮೋಹ ಮತ್ತು ಮಾದಕತೆಯನ್ನು ಉದ್ದೀಪಿಸುವ ಸಿನಿಮಾಗಳೇ ಹೆಚ್ಚು. ಕೆಲವು ಸಿನಿಮಾಗಳಂತೂ ಹಿಂಸೆಯನ್ನು ವೈಭವೀಕರಿಸಿ ಜನರ ಸೂಕ್ಷ್ಮ ಮಾನಸಿಕ ಸಂವೇದನಾಶಕ್ತಿಯನ್ನೇ ಕುಂದಿಸುತ್ತಿವೆ.

ಸಿನಿಮಾಗಳನ್ನು ನೋಡಲು ಚಿತ್ರಮಂದಿರಗಳಿಗೆ ಹೋಗುವವರೂ ಭಿನ್ನ ವಿಭಿನ್ನ ಮನಸ್ಥಿತಿಯಲ್ಲಿ ಇರುತ್ತಾರೆ. ನಶೆಯ ಅಮಲಿನಲ್ಲಿ ಬರುವವರ ಸಂಖ್ಯೆಯೂ ದೊಡ್ಡದಿದೆ. ಇಂತಹ ಸ್ಥಿತಿಯಲ್ಲಿ ರಾಷ್ಟ್ರಗೀತೆಯನ್ನು ಹಾಡಲು ಅವರನ್ನು ಎದ್ದು ನಿಲ್ಲಿಸುವುದು ಕಷ್ಟದ ಕೆಲಸವೂ ಹೌದು. ಜತೆಗೆ ಸಿನಿಮಾ ಮಂದಿರಗಳಲ್ಲಿ ರಾಷ್ಟ್ರಗೀತೆಗೆ ಒಬ್ಬ ಎದ್ದು ನಿಲ್ಲದೆ ಅಗೌರವ ತೋರಿದರೆ ಆತನನ್ನು ಶಿಕ್ಷಿಸುವವರು ಅಥವಾ ತಿದ್ದುವವರು ಯಾರು ಎನ್ನುವ ಪ್ರಶ್ನೆಯೂ ಗೊಂದಲದ್ದೇ. ಬಹುತೇಕ ಥಿಯೇಟರ್‌ನವರು ಇದೊಂದು ಅನಗತ್ಯ ಕಿರಿಕಿರಿಯ ಜವಾಬ್ದಾರಿ ಎಂದೇ ಭಾವಿಸಿದ್ದರು. ಈಗ ಸುಪ್ರೀಂಕೋರ್ಟ್ ನಿರ್ಧಾರದಿಂದ ಇಂತಹ ಅನಗತ್ಯ ಗೊಂದಲಗಳು ದೂರವಾಗಿದ್ದು ರಾಷ್ಟ್ರಗೀತೆ ಹೆಚ್ಚು ಸುರಕ್ಷಿತವಾದಂತಾಗಿದೆ.

ದೇಶಪ್ರೇಮ ಮತ್ತು ರಾಷ್ಟ್ರೀಯತೆಯ ಭಾವವನ್ನು ಯಾವುದೇ ಕಟ್ಟಾಜ್ಞೆ ಅಥವಾ ಕಾನೂನುಗಳಿಂದ ಉದ್ದೀಪಿಸಲು ಸಾಧ್ಯವಿಲ್ಲ ಎನ್ನುವುದು ನಿಜ. ಜನರ ಸಾಮೂಹಿಕ ಪಾಲ್ಗೊಳ್ಳುವಿಕೆ, ಸಮಾನ ಉದ್ದೇಶ ಮತ್ತು ಇದು ನಮಗೆ ಸೇರಿದ್ದು ಎಂಬ ಭಾವದಿಂದ ಮಾತ್ರ ದೇಶಪ್ರೇಮದ ಉದ್ದೀಪನೆ ಸಾಧ್ಯ. ಸಿನಿಮಾ ಮಂದಿರಗಳಲ್ಲಿ ರಾಷ್ಟ್ರಗೀತೆ ಕಡ್ಡಾಯಕ್ಕೆ ಸಂಬಂಧಿಸಿ ವಿಧಿ ವಿಧಾನ ರೂಪಿಸಲು ಕೇಂದ್ರ ಸರಕಾರ ರಚಿಸಿರುವ 12 ಸದಸ್ಯರ ಅಂತರ ಸಚಿವಾಲಯ ಸಮಿತಿಯೂ ಈ ತೀರ್ಪಿಗೆ ಪೂರಕ ನಿರ್ಧಾರವನ್ನೇ ಕೈಗೊಳ್ಳುವ ಸಾಧ್ಯತೆ ಇದೆ. ಪದೇ ಪದೇ, ಎಲ್ಲೆಂದರಲ್ಲಿ ರಾಷ್ಟ್ರಗೀತೆ ಹಾಡಿದರೆ ಆತ ದೊಡ್ಡ ದೇಶಭಕ್ತನಾಗುತ್ತಾನೆ ಎನ್ನುವುದು ಹುಸಿ ದೇಶಭಕ್ತಿಯ ಸಂಕೇತ. ಇದರಿಂದ ದೇಶದ ಪ್ರತಿಷ್ಠೆ ಹೆಚ್ಚುವುದಿಲ್ಲ. ಅದರ ಬದಲಾಗಿ, ಸಕಾಲಕ್ಕೆ ಸರಿಯಾದ ತೆರಿಗೆ ಕಟ್ಟಿ, ನಾಗರಿಕ ನಿಯಮಗಳನ್ನು ಶಿಸ್ತಿನಿಂದ ಪಾಲಿಸಿ, ಭ್ರಷ್ಟಾಚಾರದ ವಿರುದ್ಧ ಸೆಟೆದು ನಿಂತರೆ ದೇಶ ಇನ್ನಷ್ಟು ಬಲಿಷ್ಠವಾಗುತ್ತದೆ. ಸಾರ್ವಜನಿಕ ಶಾಂತಿಗೆ ಭಂಗವಾಗದಂತೆ ಎಲ್ಲರೂ ತಮ್ಮ ಧಾರ್ಮಿಕ ಮತ್ತು ವೈಯಕ್ತಿಕ ನಂಬಿಕೆಗಳನ್ನು ಅನುಸರಿಸಿದರೆ ಬಹುತ್ವದಲ್ಲೂ ಏಕತೆಯನ್ನು ಸಾಧಿಸುವುದು ಸುಲಭ.

■ ಬಿ.ಎಂ.ಹನೀಫ್



ಈಶ್ವರ್